ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. **518/2019**

ಸಿ.ಡಬ್ಲ್ಯೂ **-1,** ಪಿ.ಡಬ್ಲ್ಯೂ **-1**

ದಿಃ **18.12.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಸುಬ್ರಹ್ಮಣ್ಯ |
| ತಂದೆ/ಗಂಡನ ಹೆಸರು | ರಂಗಸ್ವಾಮಿ |
| ವಯಸ್ಸು | 36 ವರ್ಷ |
| ಕೆಲಸ | ಸಹಾಯಕ ಅಭಿಯಂತರರು |
| ವಾಸಸ್ಥಳ | ಹೆಚ್.ಡಿ.ಕೋಟೆ |

ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ

ನಾನು **2017** ರಿಂದ **2023** ರವರೆಗೆ ಹುಣಸೂರಿನಲ್ಲಿ ಸಹಾಯಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **30.04.2018** ರಂದು ನನಗೆ ರಾತ್ರಿ ಪಾಳೆಯಲ್ಲಿ ಚುನಾವಣಾ ನಿಮಿತ್ತವಾಗಿ ಹುಣಸೂರಿನ ಹೊಸರಾಮೇನಹಳ್ಳಿಯಲ್ಲಿ ಚುನಾವಣಾ ಅಧಿಕಾರಿಗಳ ಆದೇಶದಂತೆ ಕರ್ತವ್ಯ ಇದ್ದು, ಸುಮಾರು ರಾತ್ರಿ **11.30** ಗಂಟೆ ಸಮಯದಲ್ಲಿ ಸರ್ಕಾರಿ ಜೀಪ್ ನಂ.ಕೆಎ**-09-**ಜಿ**-326** ನಲ್ಲಿ ನಾನು, ಚಾಸಾ**-2** ಮತ್ತು **3** ರವರು ರಾತ್ರಿ ಪಾಳೆ ಕೆಲಸ ಮಾಡುತ್ತಿದ್ದ ವೇಳೆಯಲ್ಲಿ ಹೊಸರಾಮೇನಹಳ್ಳಿಯಲ್ಲಿ ಜೋರಾಗಿ ಮೈಯಿಕ್ ಶಬ್ದ ಕೇಳಿಸುತ್ತಿತ್ತು. ಚುನಾವಣಾ ನೀತಿ ಸಂಹಿತೆ ಉಲ್ಲಂಘಣೆಯಾಗಿರುತ್ತದೆಂದು ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ಯಾರೋ ಮರಣ ಹೊಂದಿದ್ದರು, ಅವರ ತಿಥಿಯ ಹರಿಕಥೆ ಮಾಡುತ್ತಿದ್ದರು. ಆಗ ನಾನು ಸದರಿ ಬಗ್ಗೆ ವಿಚಾರಿಸಲಾಗಿ ಸೋಮನಾಥ ರವರ ತಾಯಿ ಮರಣ ಹೊಂದಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿಯವರಿಗೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಈ ರೀತಿ ಜೋರಾಗಿ ಮೈಯಿಕ್ ನ್ನು ಹಾಕಬಾರದು ಎಂದು ಹೇಳಿರುತ್ತೇನೆ. ಆಗ ಪಕ್ಕದಲ್ಲಿ ವ್ಯಕ್ತಿ, ಅದನ್ನು ಕೇಳಲು ನೀವು ಯಾರು ಎಂದು ಏಕಾಏಕಿ ನನಗೆ ಏಕವಚನದಲ್ಲಿ ನಿಂದಿಸಿರುತ್ತಾರೆ. ಸದರಿ ವ್ಯಕ್ತಿಯ ಹೆಸರು ಪ್ರಭಾಕರ ಎಂದು

ಮುಂದುವರೆದು ತಿಳಿದು ಬಂದಿರುತ್ತದೆ. ಸದರಿ ಬಗ್ಗೆನಾನು ವಿಡಿಯೋ ಮಾಡಲು ಪ್ರಯತ್ನಿಸಿರುತ್ತೇನೆ. ನಾನು ಮೊಬೈಲ್ ಮೂಲಕ ವಿಡಿಯೊ ಮಾಡುತ್ತಿದ್ದು, ಮೊಬೈಲನ್ನು ಕಿತ್ತುಕೊಳ್ಳಲು ಮತ್ತೊಬ್ಬ ವ್ಯಕ್ತಿ ಬಂದು, ಮೊಬೈಲ್ ಕಿತ್ತುಕೊಂಡು ನನ್ನನ್ನು ಎಳೆದಾಡಿರುತ್ತಾನೆ ಸದರಿ ವ್ಯಕ್ತಿಯ ಹೆಸರು ಚೌಡಪ್ಪ ಎಂದು ತಿಳಿದುಬಂದಿರುತ್ತದೆ. ಇದರಿಂದ ನನ್ನ ಚುನಾವಣಾ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ನನ್ನ ಮೇಲೆ ಗಲಾಟೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ.

ನಂತರ ನಾನು ಬಿಳಿಕೆರೆ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-**1** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **1**(ಎ) ಎಂದು ಗುರುತಿಸಲಾಯಿತು.

ಮರುದಿನ ನಾನು ತೋರಿಸಿದ ಜಾಗದಲ್ಲಿ ಪೊಲೀಸರು ಬೆಳಿಗ್ಗೆ **9.00** ರಿಂದ **10.00** ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಮಹಜರ್ ಕಾಲಕ್ಕೆ ಚಾಸಾ-**5** ಮತ್ತು **6** ರವರು ಹಾಜರಿದ್ದರು. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-**2** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **2**(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು ಆರೋಪಿ ಪರ ಶ್ರೀ ವಿ.ಜಿ.ಎಂ. ವಕೀಲರಿಂದಃ

ಕೇಂದ್ರಸ್ಥಳ ಹುಣಸೂರಿನಲ್ಲಿ ಚುನಾವಣೆ ಸಲುವಾಗಿ ನೇಮಕವಾಗಿದ್ದು, ಹುಣಸೂರಿನಿಂದ **8.00-8.30** ರ ಸಮಯದಲ್ಲಿ ಹೊರಟಿರುತ್ತೇನೆ. ನಿರ್ದಿಷ್ಟವಾಗಿ ಯಾವ ಯಾವ ಊರಿಗೆ ಹೋಗಬೇಕೆಂದು ಆದೇಶ ಇತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಆದೇಶ ಪ್ರತಿಯನ್ನು ಪೊಲೀಸರಿಗೆ ನೀಡಿರುತ್ತೇನೆ. ಹುಣಸೂರು-ಮೈಸೂರು ಮುಖ್ಯ ರಸ್ತೆಯಿಂದ ಬಿಳಿಕೆರೆಗೆ ಹೋಗಿ ಅಲ್ಲಿಂದ ಕೆ.ಆರ್.ನಗರ ರಸ್ತೆಗೆ ಹೋಗಿರುತ್ತೇವೆ. ಸದರಿ ದಿನ ಬಿಳಿಕೆರೆಗೆ ಹೋಗಿರುವುದಿಲ್ಲ. ಹುಣಸೂರಿನಿಂದ ಹೊಸರಾಮೇನಹಳ್ಳಿಗೆ ಹೋಗುವಾಗ ಬಿಳಿಕೆರೆ-ಕೆ.ಆರ್,ನಗರ ಜಂಕ್ಷನ್ ಬಳಿ ತಿರುವನ್ನು ತೆಗೆದುಕೊಂಡಿರುತ್ತೇನೆ. ಹುಣಸೂರಿನಿಂದ ಜಂಕ್ಷನ್ ಗೆ ಸುಮಾರು **15**

ಕಿ.ಮೀ ಆಗಬಹುದು ಎಂದರೆ ಸರಿ. ಜಂಕ್ಷನ್ ನಿಂದ ಹೊಸರಾಮೇನಹಳ್ಳಿಗೆ **6-7** ಕಿ.ಮೀ ಆಗುತ್ತದೆ. ಹುಣಸೂರಿನಿಂದ ಮೈಸೂರಿಗೆ ಹೋಗುವ ರಸ್ತೆ ರಾಜ್ಯ ಹೆದ್ದಾರಿಯಾಗಿದ್ದು, ಸುಸ್ಥಿತಿಯಿಂದ ಕೂಡಿರುತ್ತದೆ ಎಂದರೆ ಸರಿ. ಮೈಸೂರಿನಿಂದ ಹಾಸನ್ ಗೆ ಹೋಗುವ ರಸ್ತೆ ರಾಜ್ಯ ಹೆದ್ದಾರಿಯಾಗಿದ್ದು, ಸುಸ್ಥಿತಿಯಿಂದ ಕೂಡಿರುತ್ತದೆ ಎಂದರೆ ಸರಿ. ಹುಣಸೂರಿನಿಂದ ಹೊಸರಾಮೇನಹಳ್ಳಿಗೆ **20** ನಿಮಿಷದಲ್ಲಿ ಹೋಗಬಹುದು ಎಂದರೆ ಸರಿ. ಹುಣಸೂರಿನಿಂದ **8.30** ಗಂಟೆಗೆ ಗಸ್ತು ಪ್ರಾರಂಭಿಸಿ **11.30** ಗಂಟೆ ಸಮಯದಲ್ಲಿ ಘಟನೆ ನಡೆಯಿತು ಎಂದು ದೂರು ನೀಡಿರುತ್ತೇನೆ, ಈ ಮಧ್ಯೆ ಅವಧಿಯಲ್ಲಿ ಏನು ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ನಮ್ಮ ಚುನಾವಣಾ ಕಾರ್ಯ ವ್ಯಾಪ್ತಿಯಲ್ಲಿದ್ದೇವು ಎಂದು ನುಡಿಯುತ್ತಾರೆ. ಹುಣಸೂರಿನಿಂದ ನೇರವಾಗಿ **8.30** ಗಂಟೆಗೆ ಹೊಸರಾಮೇನಹಳ್ಳಿಗೆ ಹೋಗಿರುತ್ತೇನೆಂದು ಹೇಳಿರುತ್ತೇನೆಂದರೆ ಸರಿ.

ವಿಧಾನಸಭೆ ಇತ್ತು. ಯಾವ ದಿನದಂದು ಇತ್ತು ಎಂದು ನನಗೆ ನೆನಪಿಲ್ಲ. ಘಟನೆ ನಡೆಯಿತು ಎಂದು ಹೇಳಲಾದ ವಾರ ನನಗೆ ಗೊತ್ತಿಲ್ಲ. ಗಸ್ತು ಮಾಡುವ ಸ್ಥಳದಲ್ಲಿ ಯಾವುದೇ ಚುನಾವಣಾ ನೀತಿ ಸಂಹಿತೆ ಉಲ್ಲಂಘಣೆಯಾದರೆ ಯಾರಿಗೆ ಮೊದಲು ತಿಳಿಸಬೇಕು ಎಂದು ಸುತ್ತೋಲೆ ಇತ್ತಾ ಎಂದರೆ ಸಾಕ್ಷಿ ಮುಖ್ಯ ಚುನಾವಣಾ ಅಧಿಕಾರಿಗೆ ತಿಳಿಸಬೇಕೆಂದು ಇರುತ್ತದೆ. ಸದರಿಯವರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ಪೊಲೀಸರಿಗೆ ದಾಖಲಾತಿ ನೀಡಿರುವುದಿಲ್ಲ. ನಿಪಿ-**1** ರ ದೂರಿನಲ್ಲೂ ಸದರಿ ಬಗ್ಗೆ ನಮೂದು ಮಾಡಿರುವುದಿಲ್ಲ.

ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಸುಮಾರು **20-25** ಜನ ಇದ್ದರು. ಸದರಿಯವರಲ್ಲಿ ಹೆಂಗಸರು ಮತ್ತು ಗಂಡಸರು ಎಷ್ಟು ಜನ ಇದ್ದರು ಎಂದು ಹೇಳಲಾಗುವುದಿಲ್ಲ. ಯಾರನ್ನು ಘಟನೆ ಬಗ್ಗೆ ವಿಚಾರಿಸಿರುತ್ತೀರಿ ಎಂದರೆ ಸಾಕ್ಷಿ ಸೋಮನಾಥ, ಮುಂದುವರೆದು ನನಗೆ ಹೆಸರು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಮುಖ್ಯ ರಸ್ತೆಯಿಂದ ಧ್ವನಿವರ್ಧಕ ಹಾಕಿರುವ ಸ್ಥಳ ಸುಮಾರು **15** ಅಡಿ ಅಂತರದಲ್ಲಿತ್ತು. ಸುಮಾರು ಅರ್ಧ ಕಿ.ಮೀ ದೂರದಿಂದ ಧ್ವನಿವರ್ಧಕ ಹಾಕಿರುವ ಬಗ್ಗೆ ಕೇಳಿರುತ್ತದೆ. ನಾನು ಹೋಗಿ ವಿಚಾರಿಸಿದಾಗ ಧ್ವನಿವರ್ಧಕವನ್ನು ಸ್ಥಗಿತಗೊಳಿಸಿರುತ್ತಾರೆ. ಆರೋಪಿಗಳಲ್ಲಿ ಯಾರು ಪ್ರಭಾರಕ ಮತ್ತು ಚೌಡಪ್ಪ ಎಂದು

ಗುರುತಿಸಬಲ್ಲಿರಾ ಎಂದರೆ ಸಾಕ್ಷಿ ನೋಡಿ ಪ್ರತ್ಯೇಕವಾಗಿ ಗುರುತಿಸಿರುತ್ತಾರೆ. ಆರೋಪಿತರು ನನಗೆ ತೊಂದರೆ ನೀಡಿದರು ಎಂದು ಹೇಳಿದ್ದು, ಮೊದಲು ಯಾರು ತೊಂದರೆಕೊಟ್ಟರು ಎಂದರೆ ಸಾಕ್ಷಿ ಮೊದಲು **1** ನೇ ಆರೋಪಿ ನಂತರ **2** ನೇ ಆರೋಪಿ ಎಂದು ನುಡಿಯುತ್ತಾರೆ. ಅವಾಚ್ಯವಾಗಿ ನಿಂದಿಸಿರುತ್ತಾರೆಂದು ದೂರು ನೀಡಿರುತ್ತೀರಾ, ಯಾವ ಶಬ್ದಗಳಿಂದ ನಿಂದಿಸಿರುತ್ತಾರೆಂದರೆ ಸಾಕ್ಷಿ ನ್ಯಾಯಾಲಯದಲ್ಲಿ ಅದನ್ನು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ದೂರಿನಲ್ಲಿ ಬರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಹೇಳಲು ಇಷ್ಟ ಇಲ್ಲದ ಕಾರಣ, ಅವಾಚ್ಯವಾಗಿ ಎಂದು ಬರೆದಿರುತ್ತೇನೆ ಎಂದು ನುಡಿಯುತ್ತಾರೆ.

ನನ್ನೊಂದಿಗೆ ಚಾಸಾ-**2** ಮತ್ತು **3** ರವರು ಇದ್ದರು ಎಂದು ಹೇಳಿದ್ದು, ಆ ಸಮಯದಲ್ಲಿ ಏನು ಮಾಡುತ್ತಿದ್ದರು ಎಂದರೆ ಸಾಕ್ಷಿಗೆ ನನ್ನೊಂದಿಗೆ ಇದ್ದರು ಎಂದು ನುಡಿಯುತ್ತಾರೆ. ಧ್ವನಿವರ್ಧಕ ಹಾಕಿದ್ದು, ನಾನು ವಿಚಾರಿಸಿದಾಗ ನಿಶಬ್ದಗೊಳಿಸಿರುತ್ತಾರೆಂದು ಹೇಳಿದ್ದು, ಆ ಸಮಯದಲ್ಲೂ ಚಿತ್ರಿಕರಣ ಮಾಡಲು ಅವಶ್ಯಕತೆ ಇತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಏನು ಅವಶ್ಯಕತೆ ಇತ್ತು ಎಂದರೆ ಸಾಕ್ಷಿ ಸಂಬಂಧ ಇಲ್ಲದ ವ್ಯಕ್ತಿ ನೀವು ಯಾರು ಎಂದು ಪ್ರಶ್ನಿಸಿದ್ದಕ್ಕೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ತಳ್ಳಾಡಿದರು, ಎಳೆದಾಡಿದರು ಎಂದು ಹೇಳಿದ್ದು, ಯಾರು ಆ ರೀತಿ ವರ್ತಿಸಿರುತ್ತಾರೆಂದರೆ ಸಾಕ್ಷಿ ಆರೋಪಿತರು ಎಂದು ನುಡಿಯುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಎಷ್ಟು ಸಮಯ ಇದ್ದೀರಿ ಎಂದರೆ ಸಾಕ್ಷಿ **11.30** ರಿಂದ **12.30** ವರೆಗೂ ಇದ್ದೇವು ಎಂದು ನುಡಿಯುತ್ತಾರೆ.

ನಿಪಿ-**1** ರಂತೆ ದೂರನ್ನು ಬರವಣಿಗೆ ಮೂಲಕ ಅದೇ ದಿನ ರಾತ್ರಿ **1.00** ಗಂಟೆ ಸಮಯದಲ್ಲಿ ನೀಡಿರುತ್ತೇನೆ. ರಾತ್ರಿ ಪಾಳಿ ಕೆಲಸ ರಾತ್ರಿ **8.00** ಗಂಟೆಯಿಂದ ಬೆಳಿಗ್ಗೆ **6.00** ಗಂಟೆವರೆಗೂ ಇತ್ತು. ಮಹಜರ್ ಗೆ ಬರುವಂತೆ ಬೆಳಿಗ್ಗೆ **8.30** ಗಂಟೆಗೆ ಕರೆ ಮಾಡಿರುತ್ತಾರೆ. ಯಾರು ಎಂದು ಹೇಳಲು ಆಗುವುದಿಲ್ಲ. ಕರೆ ಬಂದಾಗ ನಾನು ಹುಣಸೂರಿನಲ್ಲೇ ಇದ್ದೆ. ಬಿಳಿಕೆರೆ ಠಾಣೆಗೆ ಹೋಗಿ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಮಹಜರ್ ನ್ನು ಸುಮಾರು **9.00** ರಿಂದ **10.00** ಗಂಟೆಯವರೆಗೆ ಬರೆದಿರುತ್ತಾರೆ. ಮಹಜರ್ ಗೆ ಹೋಗುವ ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗಿರುತ್ತೇನೆ.

ಹುಣಸೂರಿನಿಂದ ಬಿಳಿಕೆರೆ ಹೋಗಲು ಸುಮಾರು **45** ನಿಮಿಷ ಬೇಕೆಂದರೆ ಸರಿ. ಯಾರು ಬಂದಿರುತ್ತಾರೆಂದರೆ ಸಾಕ್ಷಿ ಒಬ್ಬ ಪೊಲೀಸರು ಬಂದಿದ್ದು, ಅವರ ಹೆಸರು ಮಾರನಾಯಕ ಎಂದು ನುಡಿಯುತ್ತಾರೆ. ನಿಪಿ-**2** ರಂತೆ ಮಹಜರ್ ನ್ನು ಸದರಿಯವರೇ ಬರೆದಿರುತ್ತಾರೆ. ನಿಪಿ-**2** ಕ್ಕೆ ಚಾಸಾ-**5** ಮತ್ತು **6** ರವರು ಸಹಿ ಮಾಡಿರುತ್ತಾರೆ. ಸದರಿಯವರನ್ನು ಪೊಲೀಸರು ಕರೆಸಿರುತ್ತಾರೆ.

ಯಾವುದೇ ಚುನಾವಣಾ ನೀತಿ ಸಂಹಿತೆ ಉಲ್ಲಂಘಣೆಯಾದರೆ ಮೊದಲು ಚುನಾವಣಾ ಮೇಲಧಿಕಾರಿಗಳಿಗೆ ವರದಿ ಮಾಡಬೇಕು, ಆ ರೀತಿ ನಾನು ವರದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಗ್ಗೆ ಜ್ಞಾಪಣಾ ಇದ್ದು, ಅದನ್ನು ನಾನು ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಧ್ವನಿವರ್ಧಕ ಹಾಕಿಕೊಂಡಿದ್ದರು ಎಂದು ಹೇಳಿದ್ದು, ಪೊಲೀಸರು ಮಹಜರಿ ಕಾಲಕ್ಕೆ ಧ್ವನಿವರ್ಧಕವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ಧ್ವನಿವರ್ಧಕವನ್ನು ನಾನು ಹೇಳಿದ ಮೇರೆಗೆ ಸ್ಥಗಿತಗೊಳಿಸಿದ್ದರಿಂದ, ಅದನ್ನು ವಶಪಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಧ್ವನಿವರ್ಧಕ ಸ್ಥಗಿತಗೊಳಿಸಿದ್ದರೂ, ನಂತರ ವಿನಾಕಾರಣವಾಗಿ ನಾನು ಚಿತ್ರಿಕರಣ ಮಾಡಿ, ಆರೋಪಿತರು ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ, ಅವರಿಗೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ವಿಡಿಯೋ ಮಾಡಿದ ಬಗ್ಗೆ ಪೊಲೀಸರಿಗೆ ನೀಡಿರುತ್ತೇನೆ. ಪೊಲೀಸರು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚುನಾವಣಾ ನೀತಿ ಸಂಹಿತೆ ಉಲ್ಲಂಘಣೆಯ ಅಂಕಿಅಂಶಕ್ಕೋಸ್ಕರ ಮೇಲಧಿಕಾರಿಗಳನ್ನು ಮೆಚ್ಚಿಸಲು ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು